ಪರಿವರ್ತನೆ ಮಾಡಿಕೊಡಲು ಇರುವ ಅವಕಾಶವನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು. ದುರ್ಬಲವರ್ಗದವರು, ಪರಿಶಿಷ್ಟ ಜಾತಿ ಮತ್ತು ವರ್ಗ ಹಾಗೂ ಹಿಂದುಳಿದ ವರ್ಗದ ವಸತಿರಹಿತರಿಗೆ ಅವರ ಸ್ವಂತ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಲು ಪರಿವರ್ತನಾ ಶುಲ್ಕ ಮನ್ನಾ ಮಾಡುವ ಬಗ್ಗೆ ಪರಿಶೀಲನೆ ಮಾಡಲಾಗುವುದು.

(ಗೊಂದಲ)

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಕಂದಾಯ ಸಚಿವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಬಡವರ ಪರವಾಗಿ ತೀರ್ಪನ್ನು ಕೊಡುತ್ತಾರೆಂದು ಅಂದುಕೊಂಡಿದ್ದೆ. ಅವರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಗೆ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ಯೋಜನೆಯ ಫಲಾನುಭವಿಗಳನ್ನು ಹೋಲಿಸಿದರೆ ಬಹಳ ಅನ್ಯಾಯವಾಗುತ್ತದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಕೊಡಗಿನಲ್ಲಿ, ಅವರ ಕಾಫಿ ಎಸ್ಟೇಟಿನಲ್ಲಿಯೇ ರೈತರು ಮನೆಗಳನ್ನು ಕಟ್ಟತಕ್ಕ ಸಂದರ್ಭದಲ್ಲಿ 95:6(ಎ) ಗೆ ಡೀಮ್ಡ್ ಕನ್‌ವರ್ಷನ್ ಮಾಡಿ ಏನು ತಿದ್ದುಪಡಿ ತಂದಿದ್ದಾರೆ, ಅದರ ಹಿನ್ನೆಲೆಯಲ್ಲಿ ಇದನ್ನು ಪರಿಶೀಲಿಸುತ್ತೇವೆಂದು ಹೇಳಿದರೆ, ಇದು ಬಹಳ ದುರ್ಬೈವ. ಮಾನ್ಯ ಕಂದಾಯ ಸಚಿವರು ಬಹಳ ನಿರ್ದಿಷ್ಟವಾಗಿ ಹೇಳಬೇಕು. ನೀವು ಈ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಫಲಾನುಭವಿಗಳಿಗೆ ಕಲಂ 95 ರಲ್ಲಿ ಸೂಕ್ತ ತಿದ್ದುಪಡಿ ತಂದು, ಅವರು ಕನ್‌ವರ್ಷನ್ ಮಾಡಿಕೊಳ್ಳಬೇಕಾಗಿಲ್ಲ ಎನ್ನುವ ಬಗ್ಗೆ ತಿದ್ದುಪಡಿ ತರುತ್ತೇವೆನ್ನುವ ಮಾತನ್ನು ದಯಮಾಡಿ ಹೇಳಬೇಕು. ಇಲ್ಲದೇ ಹೋದರೆ, ಬಡವರ ಯೋಜನೆಗಳಿಗೆ ಇಂತಹ ಒಂದು ಸಣ್ಣ ತಿದ್ದುಪಡಿ ತರುವುದಕ್ಕಾಗುವುದಿಲ್ಲವೆಂದರೆ, ಸರ್ಕಾರ ಯಾವ ರೀತಿಯಲ್ಲಿ ಇದರ ನೆರವಿಗೆ ಬರುತ್ತದೆಂದು ಹೇಳುತ್ತದೆ? ದಯವಿಟ್ಟು ಸನ್ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಸನ್ಮಾನ್ಯ ಅಧ್ಯಕ್ಷರೇ, ಡೀಮ್ಡ್ ಕನ್‌ವರ್ಷನ್ ಎಂದು ಹೇಳಿದರೆ, ಅದರೊಳಗೆ ಎಲ್ಲಾ ಅಡಕವಾಗಿದೆ. ಅವರು ಪ್ರಾಮುಖ್ಯರಾಗಿ ಪರಿವರ್ತನಾ ಶುಲ್ಕವನ್ನು ಮನ್ನಾ ಮಾಡಬೇಕೆಂದು ಒತ್ತಾಯವಾಗಿ ಹೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆಂಬುದನ್ನು ಈ ಸದನಕ್ಕೆ ಹೇಳುತ್ತೇನೆ.

(ಆ) ಹಾಸನ ಹಾಲು ಒಕ್ಕೂಟದಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ.

+ ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ): ಮಾನ್ಯ ಅಧ್ಯಕ್ಷರೇ, ಹಾಸನ ಹಾಲು ಒಕ್ಕೂಟದಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು): ಅಧ್ಯಕ್ಷರೇ, ಮಾನ್ ಶ್ರೀ ಕೆ.ಹೆಚ್. ಹನುಮೇಗೌಡರು ಹಾಸನ ಹಾಲು ಒಕ್ಕೂಟದ ವಿಚಾರದಲ್ಲಿ ಗಮನವನ್ನು ಸೆಳೆದಿದ್ದಾರೆ. ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಅಡಿ ವಿಚಾರಣೆ ಮುಕ್ತಾಯ ಆಗಿದ್ದು, ವಿಚಾರಣಾಧಿಕಾರಿಯಾದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು (ಪಟ್ಟಣ ಬ್ಯಾಂಕು ವಿಭಾಗ) ಕೇಂದ್ರ ಕಛೇರಿ

ಇವರು ವಿಚಾರಣಾ ವರದಿಯನ್ನು ದಿನಾಂಕ: 28-2-2001 ರಂದು ಸಲ್ಲಿಸಿರುತ್ತಾರೆ. ಈ ವಿಚಾರಣಾ ವರದಿಯಲ್ಲಿ ಕಂಡುಬಂದ ಲೋಪದೋಷಗಳನ್ನು ಸರಿಪಡಿಸುವ ಸಲುವಾಗಿ ಸಹಕಾರ ಸಂಘಗಳ ಕಾಯ್ದೆ ಕಲಂ 68 ರಲ್ಲಿ ಆದೇಶ ಸಂಖ್ಯೆ: ಡಿಎವೈ 85: ಜೆಎಂಸಿ: 99-2000 ದಿನಾಂಕ: 28-3-2001 ರಂತೆ ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಬೆಂಗಳೂರು ಇವರು ಆದೇಶ ಹೊರಡಿಸಿರುತ್ತಾರೆ. ಈ ಆದೇಶದಲ್ಲಿ ಲೋಪದೋಷಗಳ ಪಟ್ಟಿ ಮಾಡಿ. ಅವುಗಳ ಮೇಲೆ ಕ್ರಮ ಕೈಗೊಂಡು ವರದಿಯನ್ನು 30 ದಿವಸದೊಳಗೆ ಸಲ್ಲಿಸಲು ನಿರ್ದೇಶಿಸಲಾಗಿದೆ. ಅಲ್ಲದೆ ಸಹಕಾರ ಸಂಘಗಳ ಕಾಯ್ದೆ ಕಲಂ 64(4) ರಲ್ಲಿ ಹೇಳಿರುವಂತೆ ಈ ವಿಚಾರಣಾ ವರದಿಯ ಪೂರ್ಣ ಕ್ರಮಕ್ಕೆ ಸಂಘಕ್ಕೆ ಕಳುಹಿಸಿದೆ. ಈ ಬಗ್ಗೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಈ ಮೂರು ಜಿಲ್ಲೆಗಳಲ್ಲಿ ಲಕ್ಷಾಂತರ ಜನ ಬಡ ರೈತರು ಹಸುಗಳನ್ನು, ಎಮ್ಮೆಗಳನ್ನು ಸಾಕಿ ಅದರಿಂದ ಬರತಕ್ಕ ಅಲ್ಪಸ್ವಲ್ಪ ದುಡ್ಡಿನಲ್ಲಿ, ಅವರ ಸಂಸಾರ ಸಾಗಿಸುತ್ತಿದ್ದಾರೆ. ಸರ್ಕಾರ ತಂದಿರತಕ್ಕ ಉಪಯುಕ್ತ ಯೋಜನೆಗಳಲ್ಲಿ ಇದು ಒಂದು ಬಹಳ ಉಪಯುಕ್ತ ಯೋಜನೆ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಇದು ತಮಗೂ ಗೊತ್ತಿದೆ ಮತ್ತು ಸದನದ ಎಲ್ಲಾ ಸದಸ್ಯರುಗಳಿಗೂ ಗೊತ್ತಿದೆ. ಅಲ್ಲಿ ಏನಾಗಿದೆ ಎಂದರೆ, ನಡೆಯಬಾರದಂಥ ವ್ಯವಹಾರಗಳು ನಡೆದು ಹೋಗಿವೆ. ನನಗೊಂದು ಅನುಮಾನ ಬರುತ್ತಾ ಇದೆ. ಸರ್ಕಾರ ಇದೆ, ಮಂತ್ರಿ ಇದ್ದಾರೆ. ಈ ಸಹಕಾರ ಇಲಾಖೆ ಇದೆಯಲ್ಲಾ, ಇದು ದೊಡ್ಡ ಇಲಾಖೆ. ಎಲ್ಲಿ ನೋಡಿದರೂ ಅವರೇ. ಮತ್ತೆ ಅವರಿಂದ ಏನಾಗುತ್ತಾ ಇದೆ. ನಿಮ್ಮ ಇಲಾಖೆಯವರು ಏನು ಮಾಡುತ್ತಾ ಇದ್ದಾರೆ. 4-5 ವರ್ಷಗಳಿಂದ ಇಷ್ಟೊಂದು ಅನ್ಯಾಯಗಳು ನಿರಂತರವಾಗಿ ನಡೆದಿದ್ದರೂ ಕೂಡ, ನಿರ್ಭೀತಿಯಿಂದ ಅನ್ಯಾಯ ಮಾಡುತ್ತಿದ್ದಾರೆ. ಯಾರದು ಏನ್ರಿ ಎನ್ನುವ ಮಟ್ಟದಲ್ಲಿ ವ್ಯವಹಾರಗಳು ನಡೆದಾಗ ಇದನ್ನು ರೈತರ ಪರವಾಗಿ ನಾವೆಷ್ಟು ಸಾರಿ ಈ ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಬೇಕು? ನೀವು ದಯವಿಟ್ಟು ಆಲೋಚನೆ ಮಾಡಿ. ಇದನ್ನು ನೀವು ಹೇಳಬೇಕು. ಸಚಿವರಾದವರಿಗೆ ನಿರ್ದಾಕ್ಷಿಣ್ಯವೂ ಇರಬೇಕು, ದಕ್ಷತೆಯೂ ಇರಬೇಕು ಮತ್ತು ಬಡವರ ಬಗ್ಗೆ ಅನುಕಂಪವೂ ಇರಬೇಕು. ಈ ಮೂರೂ ಇಲ್ಲದೇ ಹೋದರೆ, ಈ ರೀತಿ ಆಗುತ್ತದೆ. ಮೇಯುವವರು ಮೇಯುತ್ತಾರೆ, ದೊಡ್ಡವರು ದೊಡ್ಡವರಾಗಿಯೇ ಇರುತ್ತಾರೆ. ಮತ್ತೆ ಹಾಳಾಗಿ ಹೋಗುವವರು ಹೋಗುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು. ಜನ ಬಹಳ ಮೆಚ್ಚಿಕೊಂಡು ನಿಮಗೆ ಓಟು ಕೊಟ್ಟು, ಇಲ್ಲಿಗೆ ತಂದು ಕೂಡಿಸಿದ್ದಾರೆ. ಹಿಂದೆ ಆಗಿರತಕ್ಕ ಅನ್ಯಾಯಗಳನ್ನು ಸರಿಪಡಿಸಿ, ಬಡವರ ಬಗ್ಗೆ ಇರತಕ್ಕ ಸರ್ಕಾರ ಎಂದು, ನಿಮ್ಮನ್ನು ತಂದು ಕೂಡಿಸಿದ್ದಾರೆ. ಅವರ ಆಶೋತ್ತರಗಳನ್ನು ಈಡೇರಿಸಬೇಕಾದ್ದು ನಿಮ್ಮ ಕರ್ತವ್ಯ. ಆ ರೈತರ ವಿಚಾರ ನೆನೆದುಕೊಂಡು ನನಗೆ ಸಂಕಟವಾಗುತ್ತಾ ಇದೆ. ದಯವಿಟ್ಟು ಐದು ನಿಮಿಷ ಕೇಳಿ. ಯಾವ ಯಾವುದಕ್ಕೋ ಅರ್ಧ ಗಂಟೆ, ಒಂದು ಗಂಟೆ ಕಾಲ ಕಳೆಯುತ್ತೇವೆ. ಅಲ್ಲಿ ಏನಾಗಿದೆ ಎಂಬುದರ ಬಗ್ಗೆ ಇನ್ನೊಂದು ಸಾರಿ ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ: ಅವರು ಒಂದು ಲೈನ್ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಕುಳಿತು ಬಿಟ್ಟರೆ ಆಗುತ್ತದೆಯೇ? ಅಲ್ಲಿ 5 ವರ್ಷಗಳಿಂದ ದರೋಡೆಯಾಗುತ್ತಾ ಇದೆ. ಹೋದ ಸಾರಿಯೂ ಇದೇ ವಿಷಯವನ್ನು ಈ ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಮಾನ್ಯ ಸಚಿವರು "ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ, ಯೋಚನೆ ಮಾಡಬೇಡಿ. ರೈತರ ಬಗ್ಗೆ ಕಾಳಜಿ ನಮಗೆ ಮತ್ತು ನಮ್ಮ ಸರ್ಕಾರಕ್ಕೆ ನಿಮಗಿಂತ ಹೆಚ್ಚಾಗಿದೆ" ಎಂದು ಹೇಳಿದರು. ನಾನು ಅವರಿಗೆ ವಂದನೆಗಳನ್ನು ಹೇಳಿದ್ದೆ. ಈ ಅನ್ಯಾಯಗಳನ್ನು ಸರ್ಕಾರದ ಗಮನಕ್ಕೆ ತಂದು ಈಗ್ಗೆ ಒಂದು ವರ್ಷವಾಗಿದೆ. ಇನ್ನೂ ವಿಚಾರಣೆ ಮಾಡುತ್ತಲೇ ಇದ್ದಾರೆ, ಮಾಡ್ತಾರೆ. ಇವರು ಯಾವಾಗ ಮಾಡುವುದು? ನಾನು ಸ್ವಲ್ಪ ಜಸ್ಟ್ ಹೇಳಿಬಿಡುತ್ತೇನೆ. ಏನೇನು ಅಕ್ರಮಗಳು ಎಂದರೆ, ಅಕ್ರಮ ನೇಮಕಾತಿ, ರೋಸ್ಟರ್ ಸಿಸ್ಟಂ ಇಲ್ಲ. ನೀವು ಸಾಮಾಜಿಕ ನ್ಯಾಯ ದೊರಕಿಸಿಕೊಡುತ್ತೇವೆಂದು ಹೇಳುತ್ತೀರಲ್ಲಾ, ಎನು ಸಾಮಾಜಿಕ ನ್ಯಾಯ ದೊರಕಿಸಿ ಕೊಟ್ಟಿದ್ದೀರಿ? ತೆಗೆದುಕೊಂಡಿರತಕ್ಕ ನೌಕರ ವರ್ಗಕ್ಕೆ ರೋಸ್ಟರ್ ಸಿಸ್ಟಂ ಅನುಸರಿಸಿಲ್ಲ. ಆಮೇಲೆ ಒಂದೇ ಕಮ್ಯುನಿಟಿಯವರು, ಒಂದೇ ಕ್ಷೇತ್ರದವರು ಆಯ್ಕೆಯಾಗಿದ್ದಾರೆ. ಸಂದರ್ಶನಕ್ಕೆ ಬರದೇ ಇದ್ದವರಿಗೂ ನೇಮಕಾತಿ. ಏನೋ ಬಂದು ಕೇಳಿಬಿಟ್ಟರಂತೆ, ನಾನು ಬಹಳ ಬಡವ ಹಾಗೆ, ಹೀಗೆ ಎಂದು ಹೋಗಯ್ಯ ತಕೋ ಅಪಾಯಿಂಟ್‌ಮೆಂಟ್ ಎಂದು ಕೊಟ್ಟಿದ್ದಾರೆ. ಇದು ಸರ್ಕಾರವೇ? ಇದು ರೀತಿಯೇ? ಇದು ನೀತಿಯೇ? ಯಾರಾದರೂ ಹೇಳುತ್ತಾರೆ, ಕೇಳುತ್ತಾರೆಂಬ ಭಯ ಭೀತಿ ಇದೆಯೇ? ನೀವು ದಯವಿಟ್ಟು ಇದು ಹೇಳಬೇಕು. ಸಂದರ್ಶನವಿಲ್ಲದೇ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ.

12.00 ಪಿ.ಎಂ.

ನಾನು ಒಂದು ಉದಾಹರಣೆ ಹೇಳುತ್ತೇನೆ. 18 ಜನರಿಗೆ ಇಂಟರ್‌ವ್ಯೂ ಕರೆದರು. ಅವರಿಗೆ ಬೇಕು ಬೇಕಾದವರಿಗೆ ಇಂಟರ್‌ವ್ಯೂ. ಅವರು ಯಾರೂ ಬರಲಿಲ್ಲ. ಅಧಿಕಾರಿಗಳು, ಅವರಿಗೆ ಬೇಕು ಬೇಕಾದವರ ಊರು ಊರುಗಳಿಗೆ ಹೋಗಿ ಅವರಿಂದ ಅರ್ಜಿಗಳನ್ನು ತೆಗೆದುಕೊಂಡರು. ಆಮೇಲೆ ಇಲ್ಲಿ ಇಂಟರ್‌ವ್ಯೂ. ಸಾರ್ವಜನಿಕವಾಗಿ ಬಂದಿರತಕ್ಕಂಥ ಅರ್ಜಿಗಳನ್ನು ಕನ್ಸಿಡರ್ ಮಾಡಲಿಲ್ಲ. ಆಮೇಲೆ 18 ಜನರನ್ನು ಸೆಲೆಕ್ಟ್ ಮಾಡಿದರು. 10 ಜನರನ್ನು ವೈಟಿಂಗ್ ಲಿಸ್ಟ್‌ನಲ್ಲಿ ಇಟ್ಟರು. ವೈಟಿಂಗ್ ಲಿಸ್ಟ್ ಯಾವಾಗ ಇಡುತ್ತಾರೆ? ಯಾರಾದರೂ ಬರದೇ ಹೋದರೆ ಆಗ ವೈಟಿಂಗ್ ಲಿಸ್ಟ್‌ನಲ್ಲಿದ್ದವರಿಗೆ ಉದ್ಯೋಗ ಕೊಡಬೇಕೆನ್ನುರುದು ಸರ್ಕಾರದ ಕಾನೂನು ಮತ್ತು ಪದ್ಧತಿ. ಒಂದೇ ದಿನ 18 ಜನರಿಗೂ ಅಪಾಯಿಂಟ್‌ಮೆಂಟ್ ಕೊಟ್ಟರು, ಈ ವೈಟಿಂಗ್ ಲಿಸ್ಟ್‌ನಲ್ಲಿದ್ದವರಿಗೂ ಅಪಾಯಿಂಟ್‌ಮೆಂಟ್ಸ್ ಕೊಟ್ಟರು. ಕೆಲಸ ಇದೆಯೋ ಇಲ್ಲ. ಒಬ್ಬೊಬ್ಬರಿಗೆ ಸಾವಿರಾರು ರೂಪಾಯಿ ಸಂಬಳ. ಕೆಲಸ ಇಲ್ಲ, ಕಾರ್ಯ ಇಲ್ಲ. xx ಇವುಗಳನ್ನು ಹೇಳುವುದಕ್ಕೆ ಹೋದರೆ ನೀವು ಬಿಲ್ ಹೊಡೆಯುತ್ತೀರಿ.

ಅಧ್ಯಕ್ಷರು: ಮಾನ್ಯ ಹನುಮೇಗೌಡರೇ, ಇದು ಗಮನ ಸೆಳೆಯುವ ಸೂಚನೆ. ಇಲ್ಲಿ ತಾವು 2-3 ಕ್ಲಾರಿಫಿಕೇಷನ್ಸ್ ಕೇಳಬಹುದು, ಭಾಷಣ ಮಾಡುವಂತೆ ಇಲ್ಲ.

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಹೇಳಬೇಕಾದ್ದನ್ನು ಹೇಳಿಯೇ ಕುಳಿತುಕೊಳ್ಳುವುದು, ಅಲ್ಲಿಯವರೆಗೂ ಕುಳಿತುಕೊಳ್ಳುವುದಿಲ್ಲ. ನನಗೆ ತಮ್ಮ ಬಗ್ಗೆ ಅಪಾರ ಗೌರವ ಇದೆ. ಇದು ಅಪಾಯಿಂಟ್‌ಮೆಂಟ್ಸ್ ಮಾಡಿಕೊಂಡಿರತಕ್ಕಂಥ ವಿಧಾನ. ಅಪಾಯಿಂಟ್‌ಮೆಂಟ್ಸ್ ತೆಗೆದುಕೊಂಡಿರುವವರೆಲ್ಲಾ ಒಂದೇ ಕ್ಷೇತ್ರದವರು, ಒಂದೇ ಕಮ್ಯುನಿಟಿಯವರು.

ಶ್ರೀ ಸಿ. ಬೈರೇಗೌಡ: ಮಾನ್ಯ ಸದಸ್ಯರು ಏನು ಹೇಳಿದರು, ಅದು ಕಡತಕ್ಕೆ ಹೋಗುವುದು ಸರಿಯಲ್ಲ. ಈ ಸದನದಲ್ಲಿ ಯಾರು ಇದ್ದಾರೋ ಅವರ ಬಗ್ಗೆ ಬೇಕಾದರೆ ಹೇಳಲಿ.

ಶ್ರೀ ಕೆ.ಎಚ್. ಹನುಮೇಗೌಡ: ನಾನು ಯಾರ ಹೆಸರನ್ನು ಹೇಳಲಿಲ್ಲವಲ್ಲಾ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಆ ಪದಗಳು ಕಡತಕ್ಕೆ ಹೋಗತಕ್ಕಂಥಾದ್ದು ಸೂಕ್ತವಲ್ಲ.

ಅಧ್ಯಕ್ಷರು: ನಾನು ವೆರಿಫೈ ಮಾಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ: ಅವರು ಮಾತನಾಡಿದಾಗ ಆ ಪದಗಳನ್ನು ಕಡತದಿಂದ ತೆಗೆದುಹಾಕಿ, ನಾನು ಹೇಳಿದಾಗ ಆ ಪದಗಳು ಇರಬೇಕು. ನಾನು ನ್ಯಾಯವಾಗಿ ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ: ಆ ಪದಗಳನ್ನು ಕಡತದಿಂದ ತೆಗೆಯಬೇಕು.

ಅಧ್ಯಕ್ಷರು: ನಾನು ವೆರಿಫೈ ಮಾಡಿ ತೆಗೆದು ಹಾಕುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಇಡೀ ದೇಶದಲ್ಲಿರುವ ಟ್ಯಾಕ್ಸ್ ಕಟ್ಟುವಂತಹ ಜನರ ಪುಡ್ಡು, ಆ ಅರ್ಥದಲ್ಲಿ ನಾನು ಹೇಳಿದ್ದೇನೆ. ನಾನು ಇಲ್ಲಿ ವೈಯಕ್ತಿಕವಾಗಿ ಯಾರನ್ನು ಕುರಿತು ಹೇಳಿಲ್ಲ. ಸ್ವಾಮಿ ಇಂತಹ 3-4 ಇಂಟರ್‌ವ್ಯೂಗಳು ನಡೆದು ಹೋಗಿವೆ. ಆ 3-4 ಇಂಟರ್‌ವ್ಯೂನಲ್ಲಿ ಇದೇ ಕಥೆ. ಏನೂ ವ್ಯತ್ಯಾಸವಾಗಿಲ್ಲ. ಆಮೇಲೆ ಎರಡನೆಯದು ಸೀನಿಯಾರಿಟಿ ಲಿಸ್ಟ್. ಪ್ರಮೋಷನ್ ಕೊಡಬೇಕೆಂದು ಹೇಳಿ ಏನೋ ಒಂದು ಹುಮ್ಮಸ್ಸು ಬಂತು. ಹುಮ್ಮಸ್ಸು ಬಂದಾಗ ಏನು ಮಾಡಿದರು, ಒಂದು ಲಿಸ್ಟ್ ತೆಗೆದುಕೊಂಡರು. ತಮಗೆ ಬೇಕು ಬೇಕಾದವರಿಗೆ ಟಿಕ್ ಮಾರ್ಕ್ ಹಾಕಿದರು. ಸೀನಿಯಾರಿಟಿ ಪಟ್ಟಿ ಇಲ್ಲ. ಸೀನಿಯಾರಿಟಿ ಪಟ್ಟಿಯನ್ನು ಅನೌನ್ಸ್ ಮಾಡಿಲ್ಲ. ಸ್ವಾಮಿ, ತಾವು ಯಾವಾಗಲೂ ಭಾಷಣ ಮಾಡುತ್ತೀರಿ, ಬಡವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಇನ್ನಿತರರು, ಅವರಿಗೆ ನ್ಯಾಯ ದೊರೆಯಬೇಕೆಂದು, ಅಧಿಕಾರ ವಿಕೇಂದ್ರೀಕರಣ ಎಂದು ಹೇಳಿ, ಮಾಡಿ, ಭಾರಿ ಪಶ್ಚಾತ್ತಾಪಪಟ್ಟವರು.

ಅಧ್ಯಕ್ಷರು: ಮಾನ್ಯ ಹನುಮೇಗೌಡರೇ, ದಯವಿಟ್ಟು ಕ್ಷಮಿಸಿ ಭಾಷಣ ಬೇಡ. ಕ್ಲಾರಿಫಿಕೇಷನ್ಸ್ ಕೇಳಿ. ಬಜೆಟ್ ಮೇಲೆ ಭಾಷಣ ಮಾಡುವಾಗ ಮಾತನಾಡಿ, ಆಗ ನಾನು ತಮಗೆ ಮೊದಲು ಅವಕಾಶ ಕೊಡುತ್ತೇನೆ. ಅರ್ಧ ಗಂಟೆ ಮಾತನಾಡಿ.

ಶ್ರೀ ಕೆ.ಎಚ್. ಹನುಮೇಗೌಡ: ಬೇಡ, ಬೇಡ, ನಾನು ಮುಗಿಸುತ್ತೇನೆ. ಬಿಡ್ತಿ ಕೊಡಬೇಕಾದರೆ ನಿಮ್ಮ ಕಾನೂನು ಏನು ಇದೆ, ರೂಲ್ಸ್ ಏನು ಇದೆ, ಅದೆನ್ನೆಲ್ಲಾ ಬಿಟ್ಟು ಲಿಸ್ಟ್ ತೆಗೆದುಕೊಂಡು ಬೇಕು ಬೇಕಾದವರಿಗೆ, ನೆಂಟರಿಗೆ, ಇಷ್ಟರಿಗೆ ಕೊಟ್ಟರೆ ಹೇಗೆ?

ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಅಧ್ಯಕ್ಷರೇ, ಗಮನಸೆಳೆಯುವ ಸೂಚನೆಗೆ ನಿಯಮಗಳು ಇವೆ. ಆ ನಿಯಮಗಳ ಉಲ್ಲಂಘನೆಯಾಗುತ್ತಿದೆ. ನಾವು ಗಮನ ಸೆಳೆಯುವ ಸೂಚನೆಯನ್ನು ತಂದಾಗ ನೇರವಾಗಿ ಪ್ರಶ್ನೆ ಕೇಳಿ ಎಂದು ಹೇಳುತ್ತೀರಿ, ಆದರೆ ಈ ಸದನದಲ್ಲಿ ಈ ಒಂದೇ ವಿಚಾರವನ್ನು ಮೂರು ಸಾರಿ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಡಿ ಎಂದು ಯಾರೂ ಹೇಳಿಲ್ಲ. ವಿಚಾರಣೆ ಮಾಡಬೇಡಿ ಎಂದು ಯಾರೂ ಹೇಳಿಲ್ಲ. ಪಿ.ಓ.ಡಿ. ತನಿಖೆ ಮಾಡಿ, ನಮಗೇನು ಆಗಬೇಕು? ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿ ನಮಗೇನು ಆಗಬೇಕು. ನಮಗಾದರೆ ನೇರವಾಗಿ ಪ್ರಸ್ತಾಪ ಮಾಡಿ ಎಂದು ಹೇಳಿ, ಅವರಿಗಾದರೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುತ್ತೀರಿ.

ಶ್ರೀ ಕೆ.ಎಚ್. ಹನುಮೇಗೌಡ: ಈ ರೀತಿ ಜೇಷ್ಟತಾ ಪಟ್ಟಿಯನ್ನು ಮಾಡಿ ಅನ್ಯಾಯ ಮಾಡಿದ್ದಾರೆ. ಅಕ್ರಮ ಮಾಡಿದ್ದಾರೆ. ಇದು ಎರಡನೆಯದು. ಇನ್ನು ಒಂದು ಇದೆ, ಅದನ್ನು ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು: ಆಯಿತು, ಮಾನ್ಯ ಮಂತ್ರಿಗಳು ಉತ್ತರ ಹೇಳಿ. ಅದಕ್ಕೆ ಒಂದು ಲಿಮಿಟ್ ಇರಬೇಕು. ತಾವು ನನ್ನ ಕೊಠಡಿಗೆ ಬಂದು 10 ನಿಮಿಷ ಅವಕಾಶ ಕೊಡಿ ಎಂದು ಕೇಳಿದಿರಿ. "ನಾನು ಆಕ್ಷನ್ ತೆಗೆದುಕೊಳ್ಳುತ್ತೀರಾ" ಎಂದು ಮಾತ್ರ ಕೇಳುತ್ತೇನೆಂದು ಹೇಳಿದಿರಿ. ತಮಗೆ ಬಜೆಟ್ ಮೇಲೆ ಮಾತನಾಡಲು ಅವಕಾಶ ಕೊಡುತ್ತೇನೆ ಆಗ ಮಾತನಾಡಿ.

ಶ್ರೀ ಕೆ.ಎಚ್. ಹನುಮೇಗೌಡ: ಬೇಡ. ಬಜೆಟ್ ಮೇಲೆ ಮಾತನಾಡಲು ಕೊಡುವ ಅವಕಾಶವನ್ನು ಈಗ ಕೊಟ್ಟುಬಿಡಿ.

ಅಧ್ಯಕ್ಷರು: ಆಗುವುದಿಲ್ಲ. ಮಾನ್ಯ ಮಂತ್ರಿಗಳಾದ ಶಿವಕುಮಾರ್, ಉತ್ತರ ಕೊಡಿ.

ಶ್ರೀ ಕೆ.ಎಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ ಮುಗಿಸುತ್ತೇನೆ. ಹಾಸನದ ಸಂಚಿಟ ನಾನು ಹೇಳುತ್ತಿದ್ದರೆ ಅವರಿಗೇನು? ಅವರಿಗೆ ನಾನೇನೂ ಹೇಳಲಿಲ್ಲ. ಅಪಾಯಿಂಟ್‌ಮೆಂಟ್ಸ್ ಬಗ್ಗೆ ಹೇಳಿದೆ, ಮಾನ್ಯ ಸಹಕಾರ ಮಂತ್ರಿಗಳು ಚಿತ್ತವಿಟ್ಟು, ಇದನ್ನು ಕೇಳಿ. ಬೆಂಗಳೂರು ಯೂನಿಯನ್‌ನಲ್ಲಿ 4 ಲಕ್ಷ ಲೀಟರ್ ಹಾಲನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಅಲ್ಲಿ ಒಬ್ಬ ರೈತನಿಗೆ ಒಂದು ಲೀಟರ್ ಹಾಲಿಗೆ ರೂಪಾಯಿ 8-67 ಪೈಸೆ. ಅಲ್ಲಿ ನೌಕರರ ಸಂಖ್ಯೆ 1,227. ತುಮಕೂರಿನಲ್ಲಿ ಒಂದು ಲಕ್ಷ ಇರವತ್ತು ಸಾವಿರ ಲೀಟರ್ ಹಾಲು ಕಲೆಕ್ಷನ್ ಆಗುತ್ತಿದೆ. ಅಲ್ಲಿ ಒಂದು ಲೀಟರ್ ಹಾಲಿಗೆ ಕೊಡುತ್ತಿರುವ ರೇಟು ರೂಪಾಯಿ 7-75 ಪೈಸೆ. ಅಲ್ಲಿ ನೌಕರರ ಸಂಖ್ಯೆ 408. ಕೋಲಾರದಲ್ಲಿ 3 ಲಕ್ಷ 80 ಸಾವಿರ ಲೀಟರ್ ಕಲೆಕ್ಷನ್ ಆಗುತ್ತಿದೆ. ಅವರು ಕೊಡುವ ರೇಟು ಒಂದು ಲೀಟರ್ ಹಾಲಿಗೆ ರೂಪಾಯಿ 7-95 ಪೈಸೆ. ಅಲ್ಲಿರುತಕ್ಕಂಥ ನೌಕರರು ಕೇವಲ 239. ಹಾಸನ ಯೂನಿಯನ್‌ನಲ್ಲಿ 80 ಸಾವಿರ ಲೀಟರ್

ಹಾಲು ಕಲೆಕ್ಷನ್, ನೌಕರರ ಸಂಖ್ಯೆ 476. ಅವರು ಕೊಡುತ್ತಿರುವ, ರೇಟು ಒಂದು ಲೀಟರ್ ಹಾಲಿಗೆ ರೂಪಾಯಿ 7-40 ಪೈಸೆ. ಈ ಒಂದು ಐಟಂನಲ್ಲಿ ಹಾಸನ, ಚಿಕ್ಕಮಗಳೂರು ಮತ್ತು ಕೊಡಗಿನ ರೈತರಿಗೆ ಎರಡೂವರೆ ಕೋಟಿ ರೂಪಾಯಿ ಹಾಳಾಗಿದೆ. ಅಂದರೆ ಕಡಿಮೆ ಆಗಿದೆ. ಬೇರೆ ಬೇರೆ ಯೂನಿಯನ್‌ಗಳಲ್ಲಿ ಆಪ್ಶೋಂದು ರೇಟು ಕೊಟ್ಟು ರೈತರಿಗೆ ಅನುಕೂಲ ಮಾಡುವಾಗ, ಇವರು ಮಾಡಿದ ಪಾಪ ಏನು? ಹಾಸನ ಚಿಕ್ಕಮಗಳೂರು ಮತ್ತು ಕೊಡಗಿನ ರೈತರಿಗೆ ರೂಪಾಯಿ 7-40 ಪೈಸೆ ರೇಟು ಕೊಟ್ಟು ಅವರಿಗೆ ಅನ್ಯಾಯವಾಗಿದೆ. ಕೊನೆಯ ಪಕ್ಷ ತುಮಕೂರು ಯೂನಿಯನ್ ಲೆಕ್ಕದಲ್ಲಿ ರೇಟು ಕೊಟ್ಟಿದ್ದರೆ, ನಮ್ಮ ರೈತರಿಗೆ ಒಂದೂವರೆ ವರ್ಷಕ್ಕೆ, ಮೂರು ಕೋಟಿ ರೂಪಾಯಿ ದುಡ್ಡು ಬರುತ್ತಿತ್ತು. ಆ ಮೂರು ಕೋಟಿ ರೂಪಾಯಿ ದುಡ್ಡು ಹೋಯಿತಲ್ಲಾ. ನಮಗೆ ಸಂಕಟವಾಗುವುದಿಲ್ಲವೇ? ಅವರು ನಮಗೆ ಓಟು ಕೊಟ್ಟಿಲ್ಲವೇ? ಅವರು ನಿಮಗೆ ಆಶೀರ್ವಾದ ಮಾಡಿಲ್ಲವೇ? ಅದಕ್ಕೆ ನೀವು ಬಂದು ಅಲ್ಲಿ ಕುಳಿತಿಲ್ಲವೇ? ಈ ದರೋಡೆಯನ್ನು ಆ ಬಡ ರೈತರು ಯಾರ ಕೈಯಲ್ಲಿ ಹೇಳಿಕೊಳ್ಳಬೇಕು. ನಾನು ಈ ವಿಷಯದ ಬಗ್ಗೆ ಕ್ರಮಕ್ಕೆ ಒತ್ತಾಯಿಸಿ ಒಂದೂವರೆ ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ.

ಅಧ್ಯಕ್ಷರು: ಮುಗಿಸಿ, ನಾನು ನಿಯಮಾವಳಿಗಳನ್ನು ಪಾಲನೆ ಮಾಡಬೇಕು. ತಾವು ಕ್ಲಾರಿಫಿಕೇಶನ್ ಕೇಳುವುದು ಬಿಟ್ಟು ಅರ್ಧ ಗಂಟೆ ಭಾಷಣ ಮಾಡಿದರೆ ಹೇಗೆ?

ಶ್ರೀ ಕೆ.ಎಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ತುಮಕೂರಿನಲ್ಲಿ ಮತ್ತು ಕೋಲಾರದಲ್ಲಿ ಯೂನಿಯನ್ ಇದೆ. ಬೆಂಗಳೂರಿನಲ್ಲಿ ಕೆ.ಎಂ.ಎಫ್. ಎಂದು ಇದೆ. ಅಲ್ಲಿಂದ ಜಾಯಿಂಟ್ ರಿಜಿಸ್ಟ್ರಾರ್ ಒಬ್ಬರು ಈ ಅಪಾಯಿಂಟ್‌ಮೆಂಟ್ಸ್ ಮತ್ತು ಬಡ್ತಿ ಕೊಡುವ ಕಮಿಟಿಗೆ ಮೆಂಬರ್. ಅವರ ಜೊತೆಗೆ ಸಹಕಾರ ಸಂಘಗಳ ಉಪ ನಿರ್ದೇಶಕರು ಈ ಕಮಿಟಿ ಮೆಂಬರು. ಉಪ ನಿರ್ದೇಶಕರು ಪಶು ಸಂಗೋಪನಾ ಇಲಾಖೆ ಅವರು ಮೆಂಬರು. ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಅವರು ಒಬ್ಬರು ಮೆಂಬರು. ಜಿಲ್ಲಾಧಿಕಾರಿ ಹಿಂದುಳಿದ ವರ್ಗಗಳ ಇಲಾಖೆ ಅವರು ಮೆಂಬರು. ವ್ಯವಸಾಯ ಇಲಾಖಾ ನಿರ್ದೇಶಕರು ಮೆಂಬರು. ಇವರೆಲ್ಲರೂ ಸರ್ಕಾರದ ಅಧಿಕಾರಿಗಳು. ಇವರೆಲ್ಲರೂ ಇದ್ದರೂ ಕೂಡ ಇದು ಹೇಗೆ ಸ್ವಾಮಿ ಅನ್ಯಾಯ ಆಯಿತು? ಇವರೆಲ್ಲಾ ಸರ್ಕಾರಿ ಐ.ಎ.ಎಸ್. ಅಧಿಕಾರಿಗಳು. ಸಾವಿರಾರು ರೂಪಾಯಿಗಳ ಸಂಬಳ ತೆಗೆದುಕೊಳ್ಳುವವರು. 15-20 ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವವರು, ಇವರೆಲ್ಲಾ ಇದ್ದು ಆ ಬಡಪಾಯಿಗಳಿಗೆ ಹೇಗೆ ಸ್ವಾಮಿ ಅನ್ಯಾಯವಾಯಿತು? ತಾವು ದಯವಿಟ್ಟು ಇದಕ್ಕೆ ಉತ್ತರ ಕೊಡಿ.

ಅಧ್ಯಕ್ಷರು: ಮಾನ್ಯ ಶಿವಕುಮಾರ್‌ರವರೇ ತಾವು ಉತ್ತರ ಹೇಳಿ. ನೀವು ಕ್ಲಾರಿಫಿಕೇಶನ್ಸ್ ಕೇಳುತ್ತೇನೆಂದು ಹೇಳಿ ಒಂದೂವರೆ ಗಂಟೆ ಭಾಷಣ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕೆ.ಎಚ್. ರಂಗನಾಥ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಆರೋಗ್ಯ ಅಷ್ಟು ಚೆನ್ನಾಗಿಲ್ಲ. ನಾನು ತಮಾಷೆಗೆ ಹೇಳುತ್ತಿಲ್ಲ. ಅವರು ಸಾರ್ವಜನಿಕ ಹಿತದೃಷ್ಟಿಯಿಂದ ಕೇಳುತ್ತಿದ್ದಾರೆ.

ಅವರಿಗೆ ಎರಡು ನಿಮಿಷ ಅವಕಾಶ ಕೊಟ್ಟರೆ ಒಳ್ಳೆಯದು. ತಾವು ಅಷ್ಟು ಕೋಪ ಅವರ ಮೇಲೆ ಮಾಡಿದರೆ ಅದು ಅವರ ಆರೋಗ್ಯದ ಮೇಲೆ ಅಡ್ವರ್ಸ್ ಎಫೆಕ್ಟ್ ಆಗಬಹುದು.

ಅಧ್ಯಕ್ಷರು: ಅವರೂ ಸಹ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಎಚ್. ಹನುಮೇಗೌಡ: ಅವರಿಗೆ ಏನಾಗುತ್ತಿದೆಯೋ ನನಗೆ ಅರ್ಥವಾಗುತ್ತಿಲ್ಲ. ಆ ಡೈರಿ ಫಾರ್ಮ್ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ 60-70 ಜನ ಗ್ರಾ ಜುಯೆಟ್ಸ್, ಎಂ.ಎ. ಗ್ರಾ ಜುಯೆಟ್ಸ್ ಹಾಲಿನ ಕ್ಯಾನ್‌ಗಳನ್ನು ತೊಳೆಯುತ್ತಲೇ ಇದ್ದಾರೆ. ಇವರು ಅಪಾಯಿಂಟ್‌ಮೆಂಟ್ ಕೊಟ್ಟಾಗ ಕೊನೆಯ ಎರಡು ಹುಡುಗಿಯರಿಗೆ ಕೊಡಲು ಬರುತ್ತಿರಲಿಲ್ಲವೇ? ಒಬ್ಬ ಹರಿಜನ ಹುಡುಗಿ ಏನೋ ಮನೆಕಡೆ ತೊಂದರೆ ಎಂದು ಕೆಲಸಕ್ಕೆ ಬಂದು ಸೇರಿಕೊಂಡಳು. ಪಿಯುಸಿ ಫಸ್ಟ್‌ಕ್ಲಾಸ್ ಪಾಸ್. ಅವಳೂ ಕೂಡ ಆವೊತ್ತಿನಿಂದ ಇವೊತ್ತಿನ ವರೆಗೆ ಕ್ಯಾನ್‌ಗಳನ್ನು ತೊಳೆಯುತ್ತಲೇ ಇದ್ದಾಳೆ. ಅವಳ ಜೊತೆಗೆ ಸೇರಿದವರು ಇವೊತ್ತು ಕೆಲವರು ಸೂಪರ್ ಮ್ಯಾನೇಜರ್ ಆಗಿದ್ದಾರೆ. ಹರಿಜನ ಹುಡುಗಿಗೆ 1,700 ರೂಪಾಯಿ ಸಂಬಳವಾದರೆ ಅವರಿಗೆ 12,000 ರೂಪಾಯಿ ಸಂಬಳ. ಅದೇ ಎಸ್‌ಎಸ್‌ಎಲ್‌ಸಿ ಆದವರಿಗೆ ಸೂಪರ್ ಮ್ಯಾನೇಜರ್ ಎಂದು ಪ್ರಮೋಶನ್ ಕೊಟ್ಟಿದ್ದಾರೆ. ನಾನು ಚಾಲೆಂಜ್ ಮಾಡಿ ಹೇಳುತ್ತೇನೆ. ಅವರಿಗೆ ಹಿಂದಿ ಬರುವುದಿಲ್ಲ, ಇಂಗ್ಲೀಷ್ ಅರ್ಥವಾಗುವುದಿಲ್ಲ, ಕನ್ನಡದ ಸ್ಪೆಲ್ಲಿಂಗ್ ಗೊತ್ತಿಲ್ಲ. ಸಹಿ ಕೂಡ ಹಾಕಲು ಬರುವುದಿಲ್ಲ. ಅದು ವಾರದಲ್ಲಿ ಒಮ್ಮೆ ಬಂದು ಹಾಕುವುದು. ತಿಂಗಳಿಗೆ ಒಮ್ಮೆ ಬಂದು ಸಂಬಳ ತೆಗೆದುಕೊಳ್ಳುವುದು ಇರುತ್ತದೆ. ಹೀಗೂ ಎಲ್ಲಾದರೂ ಉಂಟೇ ಸ್ವಾಮಿ? ಮಾನ್ಯ ಅಧ್ಯಕ್ಷರು ತಮ್ಮ ಸ್ಥಾನದಲ್ಲಿರುವಾಗ ಇಂಥ ಘಟನೆಗಳು ತಮಗೆ ಶೋಭಾಯಮಾನವಾಗಿರುತ್ತದೆಯೇ? ತಾವುಗಳು ದಯಮಾಡಿ ಹೇಳಬೇಕು. ಅಲ್ಲಿ ಎರಡು ಕಾರ್‌ಗಳಿದ್ದು ಅದಕ್ಕೆ 24 ಜನ ಡ್ರೈವರ್ಸ್ ಇದ್ದಾರೆ. ಅವರು ತಿಂಗಳಿಗೆ ಒಮ್ಮೆ ಬಂದು ರುಜು ಮಾಡಿ ಸಂಬಳ ತೆಗೆದುಕೊಂಡು ಹೋಗುವುದು. ಮಾನ್ಯ ಸಗೀರ್ ಅಹಮದ್ ರವರೂ ಕೂಡ ತಮ್ಮ ಖಾತೆಯಲ್ಲಿ ಹಾಗೆಯೇ ಮಾಡಿಬಿಟ್ಟಾರು. ಆಮೇಲೆ ನಾವು ಎಲ್ಲಿಗೆ ಹೋಗಬೇಕಾಗುತ್ತದೋ? ದಯಮಾಡಿ ತಾವುಗಳು ಹಾಗೆ ಮಾಡಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು): ಅವರು ಬೇರೆ ವಾಹನಗಳನ್ನು ಓಡಿಸುತ್ತಾ ಇರಬಹುದು. ಆದರೆ ಅಧಿಕೃತವಾದಂಥ ಎರಡು ಕಾರ್‌ಗಳನ್ನು ಓಡಿಸುತ್ತಿದ್ದಾರೆ.

ಅಧ್ಯಕ್ಷರು: ಹನುಮೇಗೌಡರೇ, ದಯವಿಟ್ಟು ಮುಗಿಸಬೇಕು. ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಬಜೆಟ್ ಮೇಲೆ ಮಾತನಾಡುವವರು ಕಾಯುತ್ತಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ: ಅಧ್ಯಕ್ಷರೇ, ನಮ್ಮ ಜಿಲ್ಲಾ ಮಂತ್ರಿಗಳೂ ಕೂಡ ಇಲ್ಲಿ ಕುಳಿತಿದ್ದಾರೆ. ಅವರಿಗೂ ನಮ್ಮ ಕಥೆಗಳು ಗೊತ್ತು. ಅವರು ದಯಮಾಡಿ ಸ್ವಲ್ಪ ಹೇಳಬೇಕು.

ಅಧ್ಯಕ್ಷರು: ಅವರನ್ನು ಇಲ್ಲಿಗೆ ಏಕೆ ಎಳೆಯುತ್ತೀರಿ?

ಶ್ರೀ ಕೆ.ಹೆಚ್. ಹನುಮೇಗೌಡ: ಅವರು ನಮ್ಮ ಜಿಲ್ಲೆಗೆ ಉಸ್ತುವಾರಿ ಮಂತ್ರಿಗಳು ಸ್ವಾಮಿ. ನನಗೆ ಮಾತನಾಡಲು ಸಾಕಷ್ಟು ಅವಕಾಶವನ್ನು ತಾವು ಒದಗಿಸಿಕೊಡುತ್ತಿಲ್ಲವಾದುದ್ದರಿಂದ ನಾನು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ಆದರೆ ಒಂದು ಮಾತನ್ನು ನಾನು ಹೇಳುವುದೇನೆಂದರೆ ಈ ಅನ್ಯಾಯವನ್ನು ಸರಿಮಾಡದೇ ಹೋದರೆ ಮತ್ತು ಪುನಃ ನೀವು ಬಂದರೆ ನಾನು ಅಲ್ಲಿಯವರೆಗೂ ಬದುಕಿದ್ದರೆ ನಿಮ್ಮನ್ನು ಖಂಡಿತಾ ಬಿಡುವುದಿಲ್ಲ. ನನಗೆ ನೇಣು ಹಾಕಿದರೂ ಚಿಂತೆ ಇಲ್ಲ. ಈ ಅನ್ಯಾಯವು ಸರಿಹೋಗುವವರೆಗೂ ನಾನು ಸುಮ್ಮನಿರುವುದಿಲ್ಲ. ಹೋರಾಟ ಮಾಡಿಯೇ ಮಾಡುತ್ತೇನೆ. ನಮ್ಮ ಪಾರ್ಟಿಯಿಂದಲೂ ಶುರು ಮಾಡುತ್ತೇವೆ, ರೈತರನ್ನು ಒಟ್ಟುಗೂಡಿಸಿ ಆ ಸಮೂಹವನ್ನು ಎತ್ತಿಕಟ್ಟಿ ಹೋರಾಟ ಮಾಡುತ್ತೇನೆ. ನೀವು ಒಂದೇ ಮನಸ್ಸಿನಲ್ಲಿ ನೀವು ಹೇಳಿದ ಹಾಗೆ ದಕ್ಷತೆ, ನಿರ್ದಾಕ್ಷಿಣ್ಯ, ಬಡವರ ಬಗ್ಗೆ ಅನುಕಂಪ ಈ ಮೂರನ್ನು ಮನಸ್ಸಿನಲ್ಲಿ ಸ್ವಲ್ಪ ಆಲೋಚನೆ ಮಾಡಿ ಎಷ್ಟು ದಿವಸಗಳೊಳಗೆ ಇದನ್ನು ಸರಿಮಾಡುತ್ತೀರಿ ಎಂಬುದನ್ನು ದಯಮಾಡಿ ಹೇಳಬೇಕು ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಹನುಮೇಗೌಡರು ಈ ವಿಚಾರವನ್ನು ಬಹಳ ಮನಸ್ಸಿಗೆ ಹಚ್ಚಿಕೊಂಡು ಬಿಟ್ಟಿದ್ದಾರೆ. ಕಾರಣ ಏನೆಂದರೆ ಈ ಸಂಖ್ಯೆಯು ಅವರು ಕಟ್ಟಿದ ಸಂಸ್ಥೆಯಾಗಿದೆ. ಪ್ರಾರಂಭದಲ್ಲಿ ಅವರು ಅಧ್ಯಕ್ಷರಾಗಿದ್ದರು. ಸಾಮಾನ್ಯವಾಗಿ ಪ್ರಾರಂಭದಲ್ಲಿ ಯಾರ್ಯಾರು ಮನೆಕಟ್ಟಿ ಏನಾದರೂ ಹೆಚ್ಚು ಕಡಿಮೆ ಆದರೆ ಇಂಥ ಒಂದು ನೋವನ್ನು ಅನುಭವಿಸುತ್ತಾರೆ. ಹೆತ್ತವರಿಗೆ ಹೆರಿಗೆ ಬಾಧೆ ಎಂದು ಹೇಳುವ ಗಾದೆಯ ಮಾತಿನಂತೆ ಕಷ್ಟಪಟ್ಟವರಿಗೆ ನೋವು ಇದ್ದೇ ಇರುತ್ತದೆ.

ಶ್ರೀ ಕೆ.ಎಚ್. ಹನುಮೇಗೌಡ: ನಾನು ಅಲ್ಲಿ ಮೂರು ವರ್ಷಗಳ ಕಾಲ ಚೇರ್ಮನ್ ಆಗಿದ್ದೆ. ಅಷ್ಟು ಕಾಲವೂ ಡಿಎ ತೆಗೆದುಕೊಂಡಿಲ್ಲ. ಅಲ್ಲಿನ ಕಾರನ್ನು ಎರಡು ದಿನಗಳ ಕಾಲ ಕೂಡ ನನ್ನ ಮನೆಗೆ ತೆಗೆದುಕೊಂಡು ಹೋಗಿಲ್ಲ. ಕೊನೆಯ ಒಂದು ದಿನ ಒಬ್ಬ ಆಫೀಸರ್ ಬಂದು ಟೋಕನ್ ಆಗಿ ನೀವು ಒಂದು ತಿಂಗಳ ಟಿಎ ತೆಗೆದುಕೊಳ್ಳಬೇಕೆಂದು ಹೇಳಿದರು. ನಾನೇನೂ ಅಂತಹ ಕೋಟ್ಯಾಧೀಶ್ವರನಂತೂ ಅಲ್ಲ. ಆದರೂ ನಾನು ಟಿಎ, ಡಿಎ, ಎಂದು ತೆಗೆದುಕೊಳ್ಳಲಿಲ್ಲ. ಸಂಸ್ಥೆಯ ಹಿತದೃಷ್ಟಿಯಿಂದ ದುಡಿದಿದ್ದೇನೆ. ಒಂದೂವರೆ ಕೋಟಿ ರೂಪಾಯಿಗಳ ಒಂದು ಬಿಲ್ಡಿಂಗ್‌ನ್ನು ಕಟ್ಟಿಸಿದೆ. ಕೊನೆಗೆ ಎಲ್ಲಾ ಸ್ಟಾಫ್‌ನವರು ಸೇರಿ ನಿಮ್ಮ ಹೆಸರಿನಲ್ಲಿ ಒಂದು ಕಲ್ಲು ಹಾಕುತ್ತೇವೆ ಒಂದು ಸಮಾರಂಭ ಮಾಡೋಣ ಎಂದರು. ಅದಕ್ಕೆ ಎಷ್ಟು ದುಡ್ಡಾಗುತ್ತದೆ ಎಂದು ಕೇಳಿದಾಗ ನೂರು ರೂಪಾಯಿಗಳು ಆಗುತ್ತದೆ ಎಂದರು. ಆಗ ನಾನು ಬಡಪಾಯಿಗಳು ದುಡಿದ ದುಡ್ಡಿನಲ್ಲಿ ಹಾಗೆ ಮಾಡುವುದು ಬೇಡ ಎಂದು ಹೇಳಿದೆ. ಹೀಗೆ ಸಂಕಟ ಬಿದ್ದು ಕಟ್ಟಿದ ಸಂಸ್ಥೆ ಅದು.

ಶ್ರೀ ಡಿ.ಕೆ. ಶಿವಕುಮಾರ್: ತಮ್ಮ ತ್ಯಾಗವನ್ನು ನಾವು ಇಲ್ಲವೆಂದು ಹೇಳುತ್ತಾ ಇಲ್ಲ. ಹಿಂದೆ ಮಾನ್ಯರು ಪ್ರಸ್ತಾಪನೆ ಮಾಡಿದಾಗ ಅದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇನೆ. ರಿಪೋರ್ಟ್‌ನ್ನು ತರಿಸುತ್ತೇನೆ ಎಂದು ಹೇಳಿದ್ದೆ. ಆ ಎನ್‌ಕ್ವೈರಿ ಮಾಡಿಸಿದ್ದೇವೆ. ವರದಿ ಕೂಡ ಬಂದಿದೆ. ಬಂದು ಒಂದು ತಿಂಗಳಾಗಿದೆ. ಅದರಲ್ಲಿ ಬಹುಶಃ ಅವರು ಹೇಳಿದ್ದರಲ್ಲಿ ಎಲ್ಲವೂ

ನಿಜವಿಲ್ಲದಿದ್ದರೂ ಭಾಗಶಃ ನಿಜವಾಗಿದೆ. ಅಲ್ಲಿನ ಸತ್ಯಾಂಶಗಳು ಹಾಗೂ ಅಲ್ಲಿರುವ ಲೋಪದೋಷಗಳು ಕಂಡು ಬಂದಿವೆ. ಇಲ್ಲಿ ನಮ್ಮ ರಿಪೋರ್ಟ್‌ನಲ್ಲಿ ವಿವರಗಳಿವೆ. "ಅಧಿಕಾರ ಕೂಟ ರಚಿಸಿ ಸಿಬ್ಬಂದಿ ಆಯ್ಕೆ ಮಾಡಿದ ಉಪ ನಿಯಮಗಳನ್ವಯ 20-1-2 ಅನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ. 9 ಹುದ್ದೆಗಳನ್ನು ನೇಮಕ ಮಾಡಿರುವುದು ಕಾನೂನು ಬಾಹಿರವಾಗಿದೆ. 8 ಅಭ್ಯರ್ಥಿಗಳನ್ನು ಕಾಯ್ದಿರಿಸಿದ ಪಟ್ಟಿಯಿಂದ ಆಯ್ಕೆ ಮಾಡಿರುವುದು ನಿಯಮ ಬಾಹಿರವಾಗಿದೆ. ಹೀಗೆ ಎಲ್ಲಾ ವಿವರಗಳು ಇವೆ. ನಾನು ಪ್ರತಿಯೊಂದು ಪ್ರಕರಣವನ್ನು ಹೇಳಲು ಹೋಗುವುದಿಲ್ಲ. ಒಟ್ಟಾರೆ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. ಒಂದು ಸಂಸ್ಥೆಯಲ್ಲಿ ಆಯ್ಕೆ ಸಮಿತಿಯಲ್ಲಿ ನೀವು ಹೇಳಿದ ಹಾಗೆ ಅಧಿಕಾರಿಗಳು, ತಜ್ಞರು, ಸಂಸ್ಥೆಯ ಅಧ್ಯಕ್ಷರು, ಮುಂತಾಗಿ ಇರುತ್ತಾರೆ. ನಾನು ಅವರ ಹೆಸರನ್ನು ಹೇಳುವುದಿಲ್ಲ. ಅದನ್ನು ಸೆಟ್‌ರೈಟ್ ಮಾಡಬೇಕೆಂದು ನಿನ್ನೆ ತಾನೇ ಒಂದು ಪ್ರತ್ಯೇಕ ಆರ್ಡರ್‌ನ್ನು ಮಾಡಿದ್ದೇವೆ. ಅವರಿಗೆ ಸ್ವಲ್ಪ ಕಾಲಾವಕಾಶವನ್ನೂ ಕೊಟ್ಟಿದ್ದೇವೆ. ತಪ್ಪಿತಸ್ಥ ಸರಕಾರಿ ನೌಕರರ ಮೇಲೆ ಯಾವ ರೀತಿಯ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನಾವು ಆದೇಶ ಕೊಟ್ಟಿದ್ದೇವೆ. ಚುನಾಯಿತ ಪ್ರತಿನಿಧಿ ಮೇಲೆ ಸಹಕಾರ ಕಾಯಿದೆ ಕಲಂ 29-ಸಿ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬಹುದು ಆ ಕ್ರಮವನ್ನು ಜರುಗಿಸುತ್ತಾ ಇದ್ದೇವೆ. ಹೆಚ್ಚುವರಿ ಹುದ್ದೆಗಳಿಂದ ಆಗಿರುವ ನಷ್ಟಕ್ಕೆ ಯಾರ್ಯಾರು ಜವಾಬ್ದಾರರಾಗಿದ್ದಾರೆ ಅವರ ಮೇಲೆ ಕೂಡ ಕಲಂ 69ರ ಪ್ರಕಾರ ಕ್ರಮವನ್ನು ಕೈಗೊಳ್ಳುತ್ತಾ ಇದ್ದೇವೆ. ಹೀಗೆ ಕಾನೂನು ಬಾಹಿರವಾಗಿ ನೇಮಕಾತಿಯಾಗಿದೆ ಎಂಬ ವಿಚಾರವನ್ನು ಅವರು ಏನು ಹೇಳಿದ್ದಾರೆ, ಮತ್ತು ಬಡ್ತಿ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆಯೂ ಪರಿಶೀಲನೆ ಮಾಡಿ ಕ್ರಮ ಜರುಗಿಸುತ್ತೇವೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್: ಅಲ್ಲಿ ಯಾವ ರೋಸ್ಟರ್ ಕ್ರಮವನ್ನೂ ಅವರು ಅನುಸರಿಸಿಲ್ಲ. ಅದಕ್ಕೆ ತಾವೇನು ಮಾಡುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್: ನಾನು ಮಂತ್ರಿಯಾಗಿ ಕೇವಲ ರೋಸ್ಟರ್ ವಿಚಾರವನ್ನು ಮಾತ್ರ ಪರಿಶೀಲಿಸುವುದಿಲ್ಲ. ಅಲ್ಲಿ ಕಾನೂನು ಬಾಹಿರವಾಗಿ ನೇಮಕಾತಿ ಮತ್ತು ಬಡ್ತಿ ಏನು ಆಗಿದೆ ಅದನ್ನು ರದ್ದು ಮಾಡಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಬರೆದು ಬಿಟ್ಟಿದ್ದೇನೆ. ಈಗ ನಿಯಮ 68ರ ಅಡಿಯಲ್ಲಿ ಲೋಪದೋಷಗಳನ್ನು ಸರಿಪಡಿಸಲು ವರದಿ ಸಲ್ಲಿಸಿದ 30 ದಿನಗಳೊಳಗಾಗಿ ಮಾಡಬೇಕೆಂದು ನಿನ್ನೆ ತಾನೇ ಪತ್ರದ ಮೂಲಕ ತಿಳಿಸಿದ್ದೇವೆ. ಒಟ್ಟಿನಲ್ಲಿ ಕಾನೂನು ಅಡಿಯಲ್ಲಿ ಯಾವ ಅವಕಾಶಗಳು ಇವೆ, ಅದರಲ್ಲಿ ಯಾವ ರೀತಿಯಲ್ಲಿ ಕ್ರಮ ಜರುಗಿಸಲು ಸಾಧ್ಯವೋ, ಹಿಂದೆ ನಾನೇನು ಆಶ್ವಾಸನೆಗಳನ್ನು ಕೊಟ್ಟಿದ್ದೇನೋ ಅದಕ್ಕೆ ನಾನು ಬದ್ಧನಾಗಿದ್ದೇನೆ ಎಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಈ ವಿಷಯಗಳನ್ನು ತಿಳಿಸಬಯಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಸಚಿವರು ಹೇಳಿದ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಆ ನಿರ್ಭಾಗ್ಯ ರೈತರೇನಿದ್ದಾರೆ ಅವರ ಪರವಾಗಿ ಒಂದು ಕೋಟಿ ಥ್ಯಾಂಕ್ಸ್‌ನ್ನು ಈಗಲೇ ಅರ್ಪಿಸುತ್ತೇನೆ.